ಅವಳು ತನ್ನ ಈ ಜ್ಞಾನ ಭಂಡಾರವನ್ನು ಪದವಿಗೋ, ಹಣಕ್ಕೊ ಮಾರಾಟಕ್ಕಿಟ್ಟವಳಲ್ಲ. ಸುಮಾರು ಎಂಬತ್ತು ಎಂಬತ್ತೈದು ವರ್ಷದ ಈ ಅಜ್ಜಿಗೆ ಇಸವಿ 1950ರ ನಂತರ ಕಾಲ ಮುಂದಕ್ಕುರುಳದೆ ಸ್ಥಗಿತವಾಗಿದೆ. ಆ ಕಾಲದ ಮಹಾರಾಜರ ನೆನಪುಗಳ ಭಂಡಾರ ತಲೆಯತುಂಬ ತುಂಬಿಕೊಂಡಿದೆ. ಅವಳ ಕಣ್ಣಮುಂದೆ ಮಹಾರಾಜರು ಈಗಲೂ ನಡೆದಾಡುತ್ತಾರೆ; ಬೆಟ್ಟದ ಕಾನಿನಲ್ಲಿ 'ಢಂ' ಎಂದ ಅವರ ಕೋವಿಯ ಸದ್ದು ಈಗಲೂ ಕೇಳುತ್ತದೆ; ಬೇಟೆ ಪರಿವಾರದವರ ಗದ್ದಲ, ತಮಟೆಗಳ ಸದ್ದು, 'ಆನೆ, ಆನೆ' ಎಂದು ಅತಿ ದೂರದಲ್ಲಿ ಕೂಗಿದ ಸದ್ದು ತೇಲಿ ಬಂದು ಇವಳ ಕಿವಿಗೆ ಅಪ್ಪಳಿಸುತ್ತದೆ. ಅವಳ ಮಾತು ಕೇಳುತ್ತಿರುವ ನಮಗೂ ಕಾಲ ಹಿಮ್ಮುಖವಾಗಿ ಚಲಿಸತೊಡಗುತ್ತದೆ.

ಮಸಣಮ್ಮ ಹುಟ್ಟಿದಾರಭ್ಯ ಕನ್ನೇರಿ ಕಾಲೋನಿಯ ಸುತ್ತಮುತ್ತಲಿನ ದುರುಗ, ಬಾಳೆಕೊಪ್ಪ ಮುಂತಾದ ಪೋಡುಗಳಲ್ಲೇ ವಾಸಿಸುತ್ತಿದ್ದಳು. ಬಂಗಲಿ ರಂಗೇಗೌಡನನ್ನು ಮದುವೆಯಾದದ್ದರಿಂದ ಇವಳಿಗೆ ಮಹಾರಾಜರ ಸೇವಾಭಾಗ್ಯ ಒದಗಿಬಂತು. ಬಂಗಲಿ ರಂಗೇಗೌಡನ ನಿಜವಾದ ಹೆಸರು ಬರೀ ರಂಗೇಗೌಡ ಅಷ್ಟೆ. ಆದರೆ ಕೆ. ಗುಡಿಯಲ್ಲಿದ್ದ ಮಹಾರಾಜರ ಬಂಗಲೆಯ ಸಮೀಪವೇ ವಾಸಿಸುತ್ತಿದ್ದುದರಿಂದ ಮತ್ತು ಸೋಲಿಗರಲ್ಲಿ ಅನೇಕಾನೇಕ 'ರಂಗ' ಅಥವಾ 'ರಂಗೇಗೌಡ'ಗಳು ಇರುವುದರಿಂದ ಇವನನ್ನು ಬಂಗಲಿ ರಂಗೇಗೌಡ ಎಂದು ಕರೆಯುವುದು ವಾಡಿಕೆಯಾಯಿತು. ಇವನ ತಂದೆ ಬಂಗಲಿ ನಂಜೇಗೌಡನೂ ಕೆ. ಗುಡಿಯ ಬಂಗಲೆ ಸಮೀಪವೇ ವಾಸಿಸುತ್ತಿದ್ದ. ಮಸಣ್ಣಮನ ಪ್ರಕಾರ ಇವನು ಮಹಾರಾಜರಿಗೆ ಅಡಿಗೆ ಮಾಡುತ್ತಿದ್ದ! ಎಂದರೆ ಬೇಟೆಗೆಂದು ಶ್ರೀ ಮನ್ಮಹಾರಾಜರು ಕೆ. ಗುಡಿಗೆ ಕ್ಯಾಂಪ್ ಬಂದಾಗ ಮಸಣಮ್ಮನ ಮಾವ ಬಂಗಲಿ ನಂಜೇಗೌಡ ಮಹಾರಾಜರ ಅಡಿಗೆ ಭಟ್ಟರ ಜೊತೆಗೂಡಿ ಕೆಲಸಮಾಡುತ್ತಿದ್ದ. ತಂದೆಯ ಕೆಲಸ ಮಗನಿಗೂ ಮುಂದುವರೆಯಿತು. ನಿಧಾನವಾಗಿ ಬಂಗಲಿ ರಂಗೇಗೌಡ ನುರಿತ ಅಡಿಗೆಯವನಾಗಿಬಿಟ್ಟ. ಮೊದಮೊದಲು ನನಗೆ ಈ ವಿಷಯ ನಂಬಲಾಗಲಿಲ್ಲ. ಮಹಾರಾಜರು ಮೈಸೂರಿನಿಂದಲೇ ಅಡಿಗೆಯವರನ್ನು ಕರೆತರುವುದನ್ನು ಊಹಿಸಬಹುದು. ನಾಗರಿಕ ಪ್ರಪಂಚದ ಪರಿಚಯವೇ ಇರದ ಕಾಡು ಸೋಲಿಗನಿಗೆ ಪಾಕಶಾಸ್ತ್ರ ಹೇಗೆತಾನೆ ಗೊತ್ತು? ಇವನ ಅಡಿಗೆ ಮಹಾರಾಜರಿಗೆ ರುಚಿಸುತ್ತಿತ್ತು ಹೇಗೆ ಎಂದು ಅನುಮಾನ ಹುಟ್ಟಿತು. ನಾನು ಮತ್ತಷ್ಟು ಕೆದಕುತ್ತಾ ಹೋದೆ. ಕೊನೆ ಇರದ ನನ್ನ ಅನುಮಾನಗಳಿಂದ ಕುಪಿತಳಾದ ಮಸಣಮ್ಮ 'ನಿನಗೇನ ಗೊತ್ತು, ಮಾರಾಜರ ನೀ ಬಲ್ಲೆಯ; ಅವರ ದಂಡೆಲೇ ಇದ್ದವಳು ನಾ' ಎಂದು ಛೇಡಿಸಿ ಒಂದು ಘಟನೆಯನ್ನು ಹೇಳಿದಳು. ಒಮ್ಮೆ ಶ್ರೀ ಮನ್ಮಹಾರಾಜರು ಮೋಟಾರು ಕಾರಿನಲ್ಲಿ ಧುತ್ ಎಂದು ಗುಡಿಹಟ್ಟಿ ಬಂಗಲೆಗೆ ಬಂದು ಬಿಟ್ಟರು. ಅವರ ಪರಿವಾರ ನಿಧಾನವಾಗಿ ಹಿಂದೆ ಬರುತ್ತಿತ್ತು. ಬಂದವರೆ ರಂಗೇಗೌಡನಿಗೆ 'ಏನು ಅಡಿಗೆ ಮಾಡಿದ್ದೀಯ' ಎಂದರಂತೆ. ರಂಗೇಗೌಡ 'ಮಾಸಾಮಿ ಸ್ವಲ್ಪ ತಿಳಿಸಾರು – ಅನ್ನ ಇದೆ' ಎಂದನಂತೆ. ಅದೇಸಾಕು, ಬಡಿಸು ಎಂದು ಊಟಕ್ಕೆ ಕುಳಿತೇ ಬಿಟ್ಟರಂತೆ. ರಂಗೇಗೌಡನ ತಿಳಿಸಾರಿನ ರುಚಿಗೆ ಪ್ರಸನ್ನರಾದ ಮಹಾರಾಜರು ರಂಗೇಗೌಡನಿಗೆ ಬಹುಮಾನ ಕೊಟ್ಟರಂತೆ; ಅವನ ತಿಳಿಸಾರಿನ ರುಚಿಯನ್ನು ಎಲ್ಲರೆದುರು ಕೊಂಡಾಡಿದರಂತೆ.

ಅಂತೂ ಬಂಗಲಿ ರಂಗೇಗೌಡ ತನ್ನ ತಿಳಿ ಸಾರಿನ ರುಚಿಯಿಂದಲೇ ಶ್ರೀ ಮನ್ಮಹಾರಾಜರ ಮನಸ್ಸನ್ನು ಗೆದ್ದು ಬಿಟ್ಟನು. ಈ ಘಟನೆಯ ನಂತರ ಬಂಗಲಿ ರಂಗೇಗೌಡನ 'ತಿಳಿಸಾರಿನ ಮಹಾತ್ಮೆ' ದಂತಕತೆಗಳ ರೂಪ ಪಡೆಯತೊಡಗಿತು. ಮೈಸೂರಿನಲ್ಲಿದ್ದರೂ ಮಹಾರಾಜರಿಗೆ ನಂಜೇಗೌಡನ ತಿಳಿಸಾರಿನ ನೆನಪು ಮರುಕಳಿಸುತ್ತಿತ್ತಂತೆ. ಅರಮನೆಯ ಆಳುಗಳನ್ನು ಕೆ. ಗುಡಿಗೆ ಕಳುಹಿಸಿ ರಂಗೇಗೌಡರು ಮಾಡಿದ ತಿಳಿಸಾರನ್ನು ಒಂದೋ – ಎರಡೋ ಬಕೆಟ್‌ಗಳಲ್ಲಿ ಮೈಸೂರರಮನೆಗೆ ತರಿಸಿಕೊಳ್ಳುತ್ತಿದ್ದರು ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ಅನೇಕ ಸೋಲಿಗರು ಈಗಲೂ ಇದ್ದಾರೆ.

ಇಂತಹ ಪಾಕಶಾಸ್ತ್ರ ಪರಿಣತಿ ನಮ್ಮ ರಂಗೇಗೌಡನಿಗೆ ಎಲ್ಲಿಂದ ಬಂತು ಎಂದು